**ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ನ್ಯಾಯಾಧೀಶರವರ ನ್ಯಾಯಾಲಯ, ಪೊನ್ನಂಪೇಟೆ.**

**ಸಿ.ಸಿ.ನಂ.1796/2025**

**ಪಿರ್ಯಾದಿ** : ರಾಜ್ಯ ಸರ್ಕಾರ,
ಗೋಣಿಕೊಪ್ಪ ಪೊಲೀಸ್ ಠಾಣೆ.

**ವಿರುದ್ಧ**

**ಆರೋಪಿ** : ಶ್ರೀ ನೆರವಂಡ ಟಿ.ಮಾಚಯ್ಯ,
ಗಂಡ: ಪೌತಿ ತಮ್ಮಯ್ಯ,
ಪ್ರಾಯ 50 ವರ್ಷ
ವಾಸ: ನೋಕ್ಯಾ ಗ್ರಾಮ,
ಪೊನ್ನಂಪೇಟೆ ತಾಲ್ಲೂಕು, ಕೊಡಗು.

**ಆರೋಪಣೆ**

ಶ್ರೀ ಶ್ರೀನಾಥ್ ಎ., ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ಆದ ನಾನು ಆರೋಪಿತರಾದ ನಿಮ್ಮ ಮೇಲೆ ದೋಷಾರೋಪಿಸುವುದೇನೆಂದರೆ:

ದಿನಾಂಕ 04.09.2025 ರಂದು ಸಮಯ ಬೆಳಿಗ್ಗೆ 9.45 ಗಂಟೆಗೆ ಗೋಣಿಕೊಪ್ಪ ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ ದೇವರಪುರ ಗ್ರಾಮದ ನಂದನವನ ಎಸ್ಟೇಟ್ ಮುಂಭಾಗದ ಮೈಸೂರು - ತಲಚೇರಿ ರಾಜ್ಯ ಹೆದ್ದಾರಿ 90 ರಲ್ಲಿ ಸಾಕ್ಷಿ 1 ಪಣಿಎರವರ ರಮೇರ್ ಮತ್ತು ಸಾಕ್ಷಿ 2 ಪಣಿಎರವರ ರಾಜು ರವರು ಗೋಣಿಕೊಪ್ಪಕ್ಕೆ ಹೋಗಲು ಆರೋಪಿಯಾದ ನೀವು ಚಾಲನೆ ಮಾಡುತ್ತಿದ್ದ ಕೆಎ.12.ಸಿ.4395ರ ಪಿಕ್ ಅಪ್ ವಾಹನದಲ್ಲಿ ಕುಳಿತುಕೊಂಡು ಬರುತ್ತಿರುವಾಗ, ಆರೋಪಿಯಾದ ನೀವು ಸದರಿ ಪಿಕ್ ಅಪ್ ವಾಹನವನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದಿದ್ದರಿಂದ ವಾಹನ ನಿಯಂತ್ರಣಕ್ಕೆ ಬಾರದೇ ರಸ್ತೆಯ ಬಲಕ್ಕೆ ಚಲಿಸಿ ಒಮ್ಮೆಲೆ ರಸ್ತೆಯಲ್ಲೆ ಮಗುಚಿ ಬಿದ್ದು ಅಪಘಾತವಾಗಿರುತ್ತದೆ. ಆ ಕಾರಣ ಬಿ.ಎನ್.ಎಸ್ ಕಲಂ 281 ರಡಿಯಲ್ಲಿ ದಂಡಿಸಲ್ಪಡುವ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆತೆಯಲ್ಲಿ ಎಸಗಿರುತ್ತೀರೆಂದು ನಿಮ್ಮ ಮೇಲೆ ಆಪಾದಿಸಲಾಗಿದೆ.

ಎರಡನೆಯದಾಗಿ, ಮೇಲೆ ಹೇಳಲಾದ ದಿನ, ಸ್ಥಳ, ಸಮಯ ಮತ್ತು ಸಂದರ್ಭದಲ್ಲಿ ಆರೋಪಿಯಾದ ನೀವು ಅಪಘಾತ ಪಡಿಸಿದ ಪರಿಣಾಮ ಸಾಕ್ಷಿ 1 ರವರ ಎಡ ಕೈಗೆ ಸಾಮಾನ್ಯ ಸ್ವರೂಪದ ಮತ್ತು ಸಾಕ್ಷಿ 2 ರವರ ಶರೀರಕ್ಕೆ ನೋವು ಆಗಿರುತ್ತದೆ. ಆ ಕಾರಣ ಬಿ.ಎನ್.ಎಸ್ ಕಲಂ 125(ಎ) ರಡಿಯಲ್ಲಿ ದಂಡಿಸಲ್ಪಡುವ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆತೆಯಲ್ಲಿ ಎಸಗಿರುತ್ತೀರೆಂದು ನಿಮ್ಮ ಮೇಲೆ ಆಪಾದಿಸಲಾಗಿದೆ.

ಪ್ರಶ್ನೆ 1: ನಿಮಗೆ ಓದಿ ಹೇಳಲಾದ ಆರೋಪವನ್ನು ಅರ್ಥಮಾಡಿಕೊಂಡಿದ್ದೀರಾ?

ಉತ್ತರ : ಅರ್ಥವಾಯಿತು.

ಪ್ರಶ್ನೆ 2: ನಿಮ್ಮ ಮೇಲೆ ಹೊರಿಸಲಾದ ಆರೋಪವನ್ನು ಒಪ್ಪಿಕೊಳ್ಳುತ್ತೀರಾ ಅಥವಾ ವಿಚಾರಣೆಯಾಗಲೇಬೇಕೆ?

ಉತ್ತರ: ತಪ್ಪಾಯಿತು, ದಂಡ ಕಟ್ಟುತ್ತೇನೆ.

ಮೇಲ್ಕಂಡ ಎಲ್ಲಾ ಆಪಾದನೆಗಳನ್ನು ನನ್ನ ಸಮಕ್ಷಮ ಓದಿ ಹೇಳಿ ಅವರ ಹೇಳಿಕೆಯನ್ನು ಪಡೆದುಕೊಂಡು ಸತ್ಯವಾಗಿದೆ ಎಂದು ದೃಢೀಕರಿಸುತ್ತೇನೆ.

6.3.26.

ಸ್ಥಳಃ ಪೊನ್ನಂಪೇಟೆ,
ದಿಃ-06-03-2026

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ
ಪೊನ್ನಂಪೇಟೆ.